

ಗುಹೆಯೊಳಗೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದು ಅದರ ನಿಜವಾದ ಸೌಂದರ್ಯವನ್ನು ಅನುಭವಿಸಲು ಸಾಧ್ಯವಾಗಿಲ್ಲ. ಗುಹೆಯೊಳಗೆ ಕೆಲವೆಡೆ ಎದುರುಬದುರಾಗಿ ಇಬ್ಬರು ಮಾತ್ರ ಚಲಿಸುವಷ್ಟು ಅಗಲ ಕಿರಿದಾಗಿದೆ. ಗುಹಾ ಪ್ರವೇಶದಲ್ಲಿ ಚಿಕ್ಕ ಕೊಳದಲ್ಲಿ ಪವಡಿಸಿದ ಮಹಾವಿಷ್ಣುವಿನ ವಿಗ್ರಹ ಗಮನ ಸೆಳೆಯಿತು. ಇದನ್ನು ಅಲಂಕಾರಿಕವಾಗಿ ಕೆತ್ತಲಾಗಿದೆಯಷ್ಟೇ.

ಮಳೆಯ ದೆಸೆಯಿಂದ ಇಡೀ ದಿವಸದ ಪ್ರವಾಸದ ಪ್ಲಾನ್ ಮಧ್ಯಾಹ್ನಕ್ಕೆ ಮೊಟಕುಗೊಂಡಿತು. 'ಅಷ್ಟು ದೂರದಿಂದ ಬಂದಿದ್ದೀರಿ. ನೋಡುವ ಪ್ರದೇಶ ತುಂಬಾ ಇತ್ತು' ಎಂದು ಬೇಸರ ವ್ಯಕ್ತಪಡಿಸಿದರು ವಾಹನ ಚಾಲಕರಾದ ಕುಮಾರ್. ನೇಪಾಳದ ನೆನಪಿಗೆ ಸ್ವಲ್ಪ ಹೊತ್ತು ಶಾಪಿಂಗ್. ಅಲ್ಲಿನ ಅಂಗಡಿಗಳಲ್ಲಿರುವ ಹಲವು ವಿನ್ಯಾಸಗಳನ್ನು ಗಮನಿಸಿದಾಗ ಚೀನಾದ ಪ್ರಭಾವ ಹೆಚ್ಚಾಗಿ ಕಾಣುತ್ತದೆ. ಕಾಟಕೊಟ್ಟ ಮಳೆಗೆ ಬೇಸರಪಡುತ್ತಾ ಮರಳಿ ಕಠ್ಮಂಡು ಸೇರಿದಾಗ ರಾತ್ರಿಯಾಗಿತ್ತು.


ರುದ್ರಭೂಮಿ




'ಇನ್ನೂ ನೋಡಬೇಕಿತ್ತು' – ಮನಸ್ಸಿನೊಳಗಿನ ಪ್ರವಾಸಿಗ ಗೊಣಗಾಡುತ್ತಿದ್ದ!

## ಫೋಟೊ ಕ್ಲಿಕ್ಕಣೆ ಇಲ್ಲ!

ಅಂದು ಹುಣ್ಣಿಮೆ. ಪಶುಪತಿನಾಥನಿಗೆ ಖುಷಿಯ ದಿವಸ. ಆತನ ಗಣಗಳಿಗೆ ಸಂಭ್ರಮ. ದೇವಾಲಯದ ಮುಂಭಾಗ ಒಂದು ಕ್ವಿಂಟಾಲ್ ಬೆಳ್ತಿಗೆ ಅಕ್ಕಿಯ ನೈವೇದ್ಯದ ರಾಶಿ. ಬಗೆಬಗೆಯ ಖಾದ್ಯಗಳು. ವಿವಿಧ ವಿನ್ಯಾಸಗಳ ಅಲಂಕಾರ. ಸುತ್ತೆಲ್ಲಾ ಭಕ್ತರು. ಮುಖ್ಯ ಅರ್ಚಕರಿಂದ ಪೂಜೆ. ಬಳಿಕ ಭಕ್ತರು ನುಗ್ಗಿ ಅಲ್ಲಿಂದ ಖಾದ್ಯಗಳನ್ನು ಸೂರೆ ಮಾಡುತ್ತಾರೆ! ದೇವರ ಪ್ರಸಾದ ತಮ್ಮದನ್ನಾಗಿಸುವ ಆತುರ. ಪಶುಪತಿಗೆ ಇದು ವಿಶೇಷ ಸೇವೆ. ನಮಗೆಲ್ಲಾ ಹೊಸ ಆಚಾರ ಪರಂಪರೆಯೊಂದನ್ನು ನೋಡಿದ ತೃಪ್ತಿ. ನಗರದ ಎಲ್ಲೂ ಪಶುಪತಿನಾಥನ ಚಿತ್ರಗಳನ್ನು ಮಾರುವ ಅಂಗಡಿ ಗಮನಕ್ಕೆ ಬರಲಿಲ್ಲ. ದೇವಳದ ಹೊರ ಆವರಣದ ಹೊರತಾಗಿ ಇತರೆಡೆ ಫೋಟೊ ಕ್ಲಿಕ್ಕಣೆ ನಿಷೇಧ. ಅದೂ ಶಿಸ್ತಿನ ನಿಷೇಧ, ಪಾಲನೆ.

ಆಗಲೇ ಆರು ದಿವಸಗಳು ಸಂದುಹೋಗಿದ್ದುವು. ಮರುದಿವಸ ಮರಳಿ ತಾಯ್ನೆಲಕ್ಕೆ. ಎಲ್ಲರ ಮುಖ ಚಿಕ್ಕದಾಗಿತ್ತು. 'ಇಂದು ನಮ್ಮ ಮ್ಯಾರೇಜ್ ಆನಿವರ್ಸರಿ' ಎಂದು ರಾಮಕಾರಂತ–ಗೀತಾ ದಂಪತಿ ಘೋಷಿಸಿದಾಗ ಮುದುಡಿದ ಮುಖ ಅರಳಿದುವು. ಬಾಯಿ ಸಿಹಿ ಮಾಡಿದ್ದರು. ನಗರದ ಕೆಲವು ಮಾಲ್‌ಗಳಿಗೆ ಭೇಟಿ. ಪಶುಪತಿನಾಥನ ಅರ್ಚಕರನ್ನು ಅಲ್ಲಿನ ವ್ಯಾಪಾರಿ ವರ್ಗ, ಭಕ್ತವರ್ಗ ಆದರಿಸುವ ಪರಿ ಅನ್ಯಾದೃಶ. ಬಂಧುಗಳಲ್ಲೇ ನಮಗೆ ವಸತಿ ಇದ್ದುದರಿಂದ ಪ್ರವಾಸ ಹೊರೆಯಾಗಲಿಲ್ಲ. ಪ್ರವಾಸಿ ತಾಣವಾದುದರಿಂದ ಎಲ್ಲವೂ ದುಬಾರಿ.

'ನೋಡಿ... ಅದು ಭೀಮ್‌ಸೇನ್ ಟವರಿನ ಅವಶೇಷ. ಭೂಕಂಪ ಮಾಡಿದ ಅನಾಹುತ. ನಾಲ್ಕುನೂರಕ್ಕೂ ಹೆಚ್ಚು ಮಂದಿ ಮರಣವನ್ನಪ್ಪಿದ್ದರು. ಕಠ್ಮಂಡುವಿನ ಪ್ರೇಕ್ಷಣೀಯ ತಾಣವಾಗಿತ್ತು' ಎಂದು ಕಾರಿನ ಚಾಲಕ ಕುಮಾರ್ ಗಮನ ಸೆಳೆದಾಗ ಅಂದು ನಮ್ಮ ವಾಹಿನಿಗಳು ಬಿತ್ತರಿಸಿದ ಚಿತ್ರಗಳು ಕಣ್ಮುಂದೆ ಹಾದುಹೋದುವು. 'ನಮ್ಮ ನಗರದಲ್ಲಿ ಭಾರತೀಯರು ಶಾಪಿಂಗಿಗೆ ಹೋದ್ರೆ ದರ ಜಾಸ್ತಿ ಹೇಳ್ತಾರೆ... ಅವರು ಚೌಕಾಶಿ ಮಾಡುವ ಕಾರಣ ಮೊದಲೇ ದರ ಹೆಚ್ಚು ಮಾಡಿ, ನಂತರ ಕಡಿಮೆ ಮಾಡ್ತಾರೆ,' ಎಂದು ನಮ್ಮತ್ತ ನೋಡಿ ಕುಮಾರ್ ನಕ್ಕಾಗ ಚಿನ್ನದ ಸೂಜಿಯಲ್ಲಿ ಚುಚ್ಚಿದ ಅನುಭವವಾಯಿತು! ಚೀನಾದ ಪ್ರಭಾವವು ವ್ಯಾಪಾರ, ವ್ಯವಹಾರದಲ್ಲಿ ಎದ್ದು ಕಾಣುತ್ತಿತ್ತು.

ಅಲ್ಲಿನ ವಾಹನಗಳಲ್ಲಿ 'ಬುದ್ಧ ಹುಟ್ಟಿದ ನಾಡು ನೇಪಾಳ' ಬರಹಗಳು ಅವರ ರಾಷ್ಟ್ರೀಯ ಪರಂಪರೆಯೊಂದರ ಅಭಿಮಾನಕ್ಕೆ ಸಾಕ್ಷಿ ಹೇಳುತ್ತಿತ್ತು. ಇಂತಹ ಅಭಿಮಾನಗಳೇ ಒಂದು ರಾಷ್ಟ್ರವನ್ನು ಭಾವನಾತ್ಮಕವಾಗಿ ಕಟ್ಟಬಲ್ಲವು. ಹಾಗೆ ಕಟ್ಟುವಂತಹ ಮನಸ್ಸು ರೂಪುಗೊಳ್ಳಬೇಕು.